**ಬಿತ್ತನೆ ಬೀಜಗಳ ಕೊರತೆ**

**204(129) ಶ್ರೀ ಮಂಜು ಎ:** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರಾಜ್ಯದಲ್ಲಿದ್ದ ಎಲ್ಲಾ ರೀತಿಯ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರದ ಬೇಡಿಕೆ ಎಷ್ಟು;

ಆ) ಪ್ರಸ್ತುತ ಸಂಗ್ರಹದಲ್ಲಿರುವ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರದ ಪ್ರಮಾಣವೆಷ್ಟು ಹಾಗೂ ಕೊರತೆಯಿರುವ ಪ್ರಮಾಣವೆಷ್ಟು;

ಇ) ಕೊರತೆ ಸರಿದೂಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

**ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):**

ಅ) ಭಾರತ ಸರ್ಕಾರದ ಬೀಜ ಬದಲಿಕೆ ಆಧಾರದ ಪ್ರಕಾರ 2009–10ನೇ ಸಾಲಿಗೆ 10,35,123 ಕ್ವಿಂಟಾಲ್ ಪ್ರಮಾಣಿತ/ಗುಣ ಮಟ್ಟದ ಬಿತ್ತನೆ ಬೀಜದ ಬೇಡಿಕೆ ಇತ್ತು. 2009–10ನೇ ಸಾಲಿನಲ್ಲಿ ರಾಜ್ಯದಲ್ಲಿ ಡಿ.ಎ.ಪಿ–8.20 ಲಕ್ಷ ಟನ್, ಎಂ.ಒ.ಪಿ–5.15 ಲಕ್ಷ ಟನ್, ಎನ್.ಪಿ.ಕೆ–11.20 ಲಕ್ಷ ಟನ್ ಮತ್ತು ಯೂರಿಯಾ–13.75 ಲಕ್ಷ ಟನ್ ಒಟ್ಟು 38.30 ಲಕ್ಷ ಟನ್‌ಗಳಷ್ಟು ವಿವಿಧ ರಸಗೊಬ್ಬರಗಳ ಬೇಡಿಕೆ ಇತ್ತು.

ಆ) ಪ್ರಸ್ತುತ ಮುಂಗಾರು ಹಂಗಾಮಿಗೆ 7,67,990 ಕ್ವಿಂಟಾಲ್ ಪ್ರಮಾಣದ ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜದ ಬೇಡಿಕೆಯಿದ್ದು ಇದಕ್ಕನುಗುಣವಾಗಿ 10,43,055 ಕ್ವಿಂಟಾಲ್ ಪ್ರಮಾಣದ ಬಿತ್ತನೆ ಬೀಜವನ್ನು ವಿತರಿಸಲು ವಿವಿಧ ಬೀಜ ವಿತರಣಾ ಸಂಸ್ಥೆಗಳು ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತವೆ. ಬಿತ್ತನೆ ಬೀಜದ ಲಭ್ಯತೆಯು ಸಮರ್ಪಕವಾಗಿರುತ್ತದೆ.

ರಾಜ್ಯದಲ್ಲಿ ಪ್ರಸ್ತುತ ಅವಧಿಯಲ್ಲಿ (21.06.2010ಕ್ಕೆ) ಡಿ.ಎ.ಪಿ–85672, ಎಂ–ಒ.ಪಿ–67274, ಎನ್.ಪಿ.ಕೆ–106874 ಮತ್ತು ಯೂರಿಯಾ–112584 ಒಟ್ಟು–372404 ಮೆ.ಟನ್ಸ್ ವಿವಿಧ ರಸಗೊಬ್ಬರಗಳು ಕೆ.ಎಸ್.ಸಿ.ಎಂ.ಎಫ್, ಶಾಖೆಗಳಲ್ಲಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದಾಸ್ತಾನಿರುತ್ತದೆ. ರಾಜ್ಯದಲ್ಲಿ ರಸಗೊಬ್ಬರದ ಕೊರತೆಯು ಇದುವರೆವಿಗೂ ಕಂಡು ಬಂದಿರುವುದಿಲ್ಲ.

ಇ) ರಸಗೊಬ್ಬರದ ಕೊರತೆಯನ್ನು ಸರಿದೂಗಿಸಲು ಸರ್ಕಾರವು ಕಾಪು ದಾಸ್ತಾನು ಯೋಜನೆಯನ್ನು ರೂಪಿಸಿ ಅದರನ್ವಯ ಕೆ.ಎಫ್.ಸಿ.ಎಂ.ಎಫ್.,

ಬೆಂಗಳೂರು ರವರ ಮುಖಾಂತರ ವಿವಿಧ ರಸಗೊಬ್ಬರ ತಯಾರಕರಿಂದ ರಸಗೊಬ್ಬರಗಳನ್ನು ಖರೀದಿ ಮಾಡಿ ವಿವಿಧ ಜಿಲ್ಲೆಗಳಲ್ಲಿ ದಾಸ್ತಾನು ಮಾಡಲಾಗುತ್ತಿದೆ. ಇದುವರೆವಿಗೂ ರಸಗೊಬ್ಬರ ವಿತರಣೆ ಮಾಡುವ ಪ್ರಕ್ರಿಯೆಯಲ್ಲಿ ಯಾವುದೆ ರೈತರಿಗೆ ತೊಂದರೆಯಾಗಿರುವುದಿಲ್ಲ.

**ಸಹಕಾರ ಸಂಘಗಳು**

**205(551) ಶ್ರೀ ನೆ ಲ ನರೇಂದ್ರಬಾಬು:**(ಮಹಾಲಕ್ಷ್ಮಿ ಲೇಔಟ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳು ಎಷ್ಟು? ಇವುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು? (ವೃಂದವಾರು ವಿವರ ನೀಡುವುದು)

ಆ) ಸಹಕಾರ ಸಂಘಗಳ ಉಪ ನಿಬಂಧಕರ ನ್ಯಾಯಾಲಯಗಳಲ್ಲಿ ನಿರ್ದೇಶಕರುಗಳ ಆಯ್ಕೆಗೆ ಸಂಬಂಧಿಸಿದಂತೆ ಇನ್ನೂ ಇತ್ಯರ್ಥವಾಗದಿರುವ ಅರ್ಜಿಗಳೆಷ್ಟು?

ಇ) ನಿರ್ದೇಶಕರುಗಳ ಅವಧಿ ಮುಗಿಯುತ್ತಿದ್ದರೂ, ಕೇಸುಗಳು ವಿಲೇವಾರಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇವುಗಳನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು? (ವಿವರ ನೀಡುವುದು)

**ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):**

ಅ) ದಿನಾಂಕ: 31.03.2010 ಕ್ಕೆ ಇದ್ದಂತೆ ರಾಜ್ಯದಲ್ಲಿ ಒಟ್ಟು 34,863 ಸಹಕಾರ ಸಂಘಗಳಿರುತ್ತವೆ. ಇವುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಒಟ್ಟು 95,525 ಇರುತ್ತವೆ (ವೃಂದವಾರು ವಿವರಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ಆ) 66 ಪ್ರಕರಣಗಳು ಬಾಕಿ ಉಳಿದಿರುತ್ತದೆ.

ಇ) ಅಂತಹ ಪ್ರಕರಣಗಳು ಇರುವುದಿಲ್ಲ.

ಈ) ಅನ್ವಯಿಸುವುದಿಲ್ಲ.